**ಪ್ರಮಾಣೀಕರಿಸಲಾದ ದಿನಾಂಕ: 30.08.2025.**

**<u>ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. S.S ವಕೀಲರಿಂದ</u> :-**

ಈ ದಾವೆಯನ್ನು ಕೃಷ್ಣ ಜಯಮ್ಮನವರ ವಿರುದ್ಧ ದಾಖಲಿಸಿರುತ್ತಾರೆ. ಈ ದಾವೆಯನ್ನು 13 X 30 ಅಡಿ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ದಾಖಲಿಸಿರುತ್ತಾರೆ. ಸದರಿ ಆಸ್ತಿಯು ವಾದಿಗೆ ಆತನ ತಂದೆಯಿಂದ ಬಂದಿರುತ್ತದೆ. ವಾದಿಯು ಮೊದಲು ದಾವಾ ಆಸ್ತಿಯಲ್ಲಿರುವ ಮನೆಯಲ್ಲಿ ವಾಸವಿದ್ದು ಅದು ಈಗ ಬಿದ್ದು ಹೋಗಿರುವುದರಿಂದ ಅವರು ಬೇರೆ ಕಡೆ ಗಾಂಧಿನಗರದಲ್ಲಿ ವಾಸವಿರುತ್ತಾರೆ. ವಾದಿಯು ಪತ್ರಕರ್ತನಾಗಿರುತ್ತಾನೆ. ವಾದಿಯು ಒಂದು ಬಾರಿ ಮುನಿಸಿಪಲ್ ಎಲೆಕ್ಷನ್‌ನಲ್ಲಿ ನಿಂತಿದ್ದನೆಂದರೆ ಗೊತ್ತಿಲ್ಲ. ದಾವಾ ಆಸ್ತಿಯಿಂದ 4ನೇ ಮನೆಯಲ್ಲಿ ನಾನು ವಾಸವಿದ್ದೇನೆ, ಹಾಗಾಗಿ ವಾದಿಯ ಪರಿಚಯ ನನಗೆ ಇದೆ.

1ನೇ ಪ್ರತಿವಾದಿಯ ಪರಿಚಯ ನನಗೆ ಇದೆ. ಆಕೆಯ ಮನೆಯು 2 ಭಾಗದಲ್ಲಿದ್ದು ಒಂದು ಭಾಗದಲ್ಲಿ ಆಕೆ ಹಾಗೂ ಆಕೆಯ ಮಗಳು ಮತ್ತೊಂದು ಭಾಗದಲ್ಲಿ ಆಕೆಯ ಮತ್ತೊಬ್ಬ ಮಗಳು ವಾಸವಿದ್ದಾರೆ. ಜಯಮ್ಮರವರು ಉತ್ತರ ಭಾಗದ ಬಾಗಿಲಿನಲ್ಲಿ ವಾಸವಿದ್ದಾರೆ. ಮತ್ತೊಂದು ಮಗಳು ಕೂಡ ಉತ್ತರ ಭಾಗದ ಬಾಗಿಲಿನ ಮನೆಯಲ್ಲಿ ಇದ್ದಾರೆ. 1ನೇ ಪ್ರತಿವಾದಿಯ ಮನೆಯ ಪೂರ್ವದಲ್ಲಿ ಆಕೆಯ ಮತ್ತೊಬ್ಬ ಮಗಳ ಮನೆ ಇದೆ. 1ನೇ ಪ್ರತಿವಾದಿಯ ಮಗಳ ಮನೆಯ ಪಶ್ಚಿಮ ದಿಕ್ಕಿನಲ್ಲಿ ಒಂದು ಬಚ್ಚಲು ಮನೆ ಇದೆ ಎಂದರೆ ನಾನು ನೋಡಿರುವುದಿಲ್ಲ. ಅವರ ಮನೆಯ ಉತ್ತರ ದಿಕ್ಕಿನಲ್ಲಿ ಪೂರ್ವ ಪಶ್ಚಿಮವಾಗಿ ಒಂದು ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯಿಂದಲೇ ಅವರ ಮನೆಗೆ

ಹೋಗಬೇಕು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ 13 X 30 ಅಡಿ ಎಂದು ನಾನು ಹೇಳಿದ್ದು ಅದನ್ನು ಯಾರು ಅಳತೆ ಮಾಡಿಸಿದ್ದಾರೆ ಎಂದರೆ ಸಾಕ್ಷಿಯು ಮುನಿಸಿಪಾಲಿಟಿಯವರು ಅಳತೆ ಮಾಡಿಸಿರುತ್ತಾರೆ ಎನ್ನುತ್ತಾರೆ. ಸದರಿ ಅಳತೆಯನ್ನು 5-6 ವರ್ಷಗಳ ಹಿಂದೆ ಮಾಡಿರುತ್ತಾರೆ. ಆ ಕಾಲಕ್ಕೆ ನಾನು ಇರಲಿಲ್ಲ. ಸದರಿ ಅಳತೆಯ ಬಗ್ಗೆ ನನ್ನ ಹೆಂಡತಿ ನನಗೆ ಹೇಳಿರುತ್ತಾರೆ. ವಾದಿಯ ಜಮೀನಿನ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಮನೆ ಬಿದ್ದು ಹೋಗಿರುತ್ತದೆ. ವಾದಿಯ ಮನೆಗೆ ಉತ್ತರದ ಬಾಗಿಲು ಎಂದರೆ ಸರಿ. ಸದರಿ ಮನೆಯ ಹಿಂಭಾಗದಲ್ಲಿ ವಾದಿಯ ತಂದೆ ವಾಸವಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ವಾದಿಯು ಮನೆಯನ್ನು ಕಟ್ಟಲು ಲೈಸೆನ್ಸ್ ನ್ನು ಪಡೆದಿರುತ್ತಾರೆ ಎಂದು ಹೇಳಿ ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯು ನನಗೆ ಬಹಳ ಆತ್ಮೀಯನಾಗಿದ್ದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**